ಓ ಎಸ್ **58/2018** ಪಿ.ಡಬ್ಲ್ಯೂ - **1** ಲಕ್ಷ್ಮಣ ಹುಗ್ಗಿ

**(ದಿನಾಂಕಃ 17-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಮ್ ವಿ ವಕೀಲರಿಂದ -**

**1.** ನಾನು ಇವತ್ತು ಫೊಟೊ ನೋಡುತ್ತಿದ್ದು ಅದು ದಾವಾ ಜಮೀನಿನ ಫೊಟೊ ಎಂದರೆ ಸರಿಯಲ್ಲ. ಇನ್ನೂ **2** ಫೋಟೊ ನೋಡುತ್ತಿದ್ದೇನೆ ಅವು ದಾವಾ ಜಮೀನಿಗೆ ಸಂಬಂಧ ಪಟ್ಟಿದ್ದು ಎಂದರೆ ನಿಜ. ಅವುಗಳನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿ.ಡಿ-**1** ಮತ್ತು **2** ಎಂದು ಗುರುತಿಸಲಾಯಿತು. ಇನ್ನೂ **2** ಫೋಟೊ ನೋಡುತ್ತಿದ್ದೇನೆ ಅವು ದಾವಾ ಜಮೀನಿನಲ್ಲಿ ಶೆಡ್ಡು ಮತ್ತು ಮನೆ ಕಟ್ಟಿರುವುದು ಕಾಣುತ್ತಿದ್ದೆ. ಅವುಗಳನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿ.ಡಿ-**3** ಮತ್ತು **4** ಎಂದು ಗುರುತಿಸಲಾಯಿತು. ಅದು ಹಳೆ ಶೆಡ್ಡು ಎಂದು ನುಡಿಯುತ್ತಾರೆ. ಫೊಟೊಗಳಿಗೆ ಸಂಬಂಧಪಟ್ಟ ಸಿಡಿ ಮತ್ತು ರಸೀದಿಯನ್ನು ನಿ.ಡಿ-**5** ಮತ್ತು ನಿ.ಡಿ-**6** ಎಂದು ಗುರುತಿಸಲಾಯಿತು. ನಿ.ಡಿ-**4** ರ ಫೊಟೊದಲ್ಲಿ ಕಾಣುತ್ತಿರುವ ಶೆಡ್ಡು ನಮ್ಮ ಬಾಜು ಹೊಲದವರಾದ ಶಿವಲಿಂಗ ಮುತ್ನಳ್ಳಿ ಇವರಿಗೆ ಸೇರಿದ್ದು ಎಂದು ಹೇಳುತ್ತಾರೆ. ಸದರಿ ನಿ.ಡಿ-**4** ರಲ್ಲಿ ಕಾಣುತ್ತಿರುವ ಶೆಡ್ಡು ನಮ್ಮ ಅಣ್ಣ ತಮ್ಮಂದಿರರದು ಎಂದರೆ ಸರಿಯಲ್ಲ. ಶೆಡ್ಡು ಇರುವಂತಹ ಜಮೀನಿನಲ್ಲಿ ನನ್ನ ದೊಡ್ಡಪ್ಪನ ಮಗ ಕಾಡಪ್ಪ ಹುಗ್ಗಿ ಇವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜಮೀನುಗಳಲ್ಲಿ ಪ್ರತ್ಯೇಕ ಸ್ವಾಧೀನ ಇಟ್ಟುಕೊಂಡು ಸಾಗು ಮಾಡುತ್ತ ಬಂದಿದ್ದಾರೆ , ಈ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿ - **2, 5** ಮತ್ತು **6** ಇವರು ಸದರಿ ಜಮಿನುಗಳನ್ನು ಪ್ರತ್ಯೇಕವಾಗಿ ಸಗು ಮಾಡುತ್ತ ಬಂದಿರುವ ವಿಚಾರ ನಗಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ಮೇನೆ ಎಂದರೆ ಸರಿಯಲ್ಲ. **2**ನೇ ಪ್ರತಿವಾದಿ ಕಾಡಪ್ಪ, ಹಾಗೂ **5** ಮತ್ತು **6**ನೇ ಪ್ರತಿವಾದಿ ಸದರಿ ಜಮೀನಿನ ಮೇಲೆ ಪಿ ಕೆ ಪಿ ಎಸ್ ಹಾಗೂ ಇತರೆ ಸೊಸೈಟಿಗಳಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. **5** ಮತ್ತು **6**ನೇ ಪ್ರತಿವಾದಿಗಳು ತಮ್ಮ ಹಿಸ್ಸಗೆ ಬಂದ ಜಮೀನನ್ನು ಮಾರಾಟ ಮಾಡಲಿಕ್ಕೆ ಪ್ರಯತ್ನ ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ **11** ಮತ್ತು **12** ಪ್ರತಿವಾದಿಗಳು ಆ ಜಮೀನನ್ನು ಹೆಚ್ಚಿ ನ ಬೆಲೆಗೆ ಖರೀದಿ ಮಾಡಲು ಮುಂದೆ ಬಂದಿದ್ದರು ಎಂದರೆ ಸರಿಯಲ್ಲ. **5** ಮತ್ತು **6** ನೇ ಪ್ರತಿವಾದಿಗಳು ಸದರಿ ಜಮೀನಿಗೆ ಸಂಬಂಧ ಪಟ್ಟಂತೆ **1/3** ಹಿಸ್ಸಾವನ್ನು ಮಾರಾಟ ಮಾಡಲು **11** ಮತ್ತು **12** ನೇ ಪ್ರತಿವಾದಿಗಳಿಗೆ ಕ್ರಯದ ಕರಾರು ಪತ್ರ ಸಹ

ಮಾಡಿ ಕೊಟ್ಟು ಸಂಚಗಾರ ಹಣ ರೂ. 75,000/- ಪಡೆದಿದ್ದರು ಎಂದರೆ ಸರಿಯಲ್ಲ. 11 ಮತ್ತು 12 ನೇ ಪ್ರತಿವಾದಿಗಳು 5 ಮತ್ತು 6ನೇ ಪ್ರತಿವಾದಿಗಳ ಮೇಲೆ ಓ ಎಸ್ 318/2017 ಮತ್ತು 319/2017 ರಂತೆ ಅಸಲು ದಾವೆ ಸದರಿ ಜಮೀನಿನ ಕ್ರಯದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ಮಾಡಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ 5 ಮತ್ತು 6ನೇ ಪ್ರತಿವಾದಿಗಳು 11 ಮತುತ 12ನೇ ಪ್ರತಿವಾದಿಗಳ ಜೊತೆಗೆ ರಾಜಿ ಡಿಕ್ರಿ ಮಾಡಿಕೊಂಡಿದ್ದಾರೆ ಎಂದರೆ ನಿಜ. ಆ ಡಿಕ್ರಿ ಪ್ರಕಾರ 11ಎ ನಕ್ಷೆಗೆ ಅರ್ಜಿ ಕೊಟ್ಟಿದ್ದರು ಎಂದರೆ ನಿಜ. ಸರ್ವೆ ಡಿಪಾರ್ಟಮೆಂನವರು ಆ ಜಮೀನಿಗೆ ಸಂಬಂಧಿಸಿದಂತೆ 2 ನಕ್ಷೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಆ ನಕ್ಷೆ ಆಧಾರದ ಮೇಲೆ, 11 ಮತ್ತು 12 ಪ್ರತಿವಾದಿಗಳಿಗೆ ಸಬ್ ರಜಿಸ್ಟ್ರಾರ ಕಛೇರಿಯಲ್ಲಿ ನೊಂದಣಿ ಖರೀದಿ ಪತ್ರ ಆಗಿದೆ ಎಂದರೆ ಆ ರೀತಿ ಆದಾಗಲೇ ನಾನು ಕೋರ್ಟಿಗೆ ಬಂದೆ ಎಂದು ಹೇಳುತ್ತಾರೆ. ಖರೀದಿ ಪತ್ರದ ಆಧಾರದ ಮೇಲೆ 11 ಮತ್ತು 12 ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಯಲ್ಲಿ ಎಂಟ್ರಿ ಆಗಿದೆ ಎಂದರೆ ಆ ರೀತಿ ಆದಾಗಲೇ ನಾನು ಕೋರ್ಟಿಗೆ ಹಾಗೂ ಎಸಿ ಆಫೀಸಿಗೂ ಹೋದೆ ಎಂದು ಹೇಳುತ್ತಾರೆ.

**(ಮುಂದುವರೆದ ಪಾಟೀ ಸವಾಲನ್ನು ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದೂಡಲಾಯಿತು. )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ.ಕೇ. ಸರಿ ಅದೆ.

(ಆದಿತ್ಯ ಆರ್. ಕಲಾಲ್)

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**